# ಸ್ವಾಮಿ ಬ್ರಹ್ಮಾನಂದರ ನೆನಪುಗಳು

ಸ್ವಾಮಿ ಅಂಬಿಕಾನಂದ

*ಶ್ರೀರಾಮಕೃಷ್ಣರ ನೇರ ಶಿಷ್ಯರಾದ ಸ್ವಾಮಿ ಬ್ರಹ್ಮಾನಂದರು ಯಾವಾಗಲೂ ದಿವ್ಯಭಾವದಲ್ಲಿ ಇರುತ್ತಿದ್ದರು. ಸ್ವಲ್ಪ ಸೂಚನೆ ಸಿಕ್ಕಿದರೂ ಅವರು ಭಗವದ್ರಾಜ್ಯವನ್ನು ಪ್ರವೇಶಿಸಿಬಿಡುತ್ತಿದ್ದರು. ಅವರ ಈ ಪ್ರವೃತ್ತಿಯನ್ನು ಈ ಕೆಳಗಿನ ನೆನಪುಗಳು ದೃಢೀಕರಿಸುತ್ತವೆ. ಆಂಗ್ಲಭಾಷೆಯಿಂದ ಇವನ್ನು ಕನ್ನಡಿಸಿದವರು ಆಶ್ರಮದ ಭಕ್ತರಾದ ಡಾ. ಇ. ವಸಂತ ಕುಮಾರ್ ಅವರು.*

ನನ್ನ ತಂದೆತಾಯಿಗಳು ಶ್ರೀರಾಮಕೃಷ್ಣರ ಭಕ್ತರು. ಅವರನ್ನು ನೋಡಲು ಆಗಾಗ ದಕ್ಷಿಣೇಶ್ವರಕ್ಕೆ ಹೋಗುತ್ತಿದ್ದರು. ನನ್ನ ತಾಯಿ ಗರ್ಭಿಣಿಯಾಗಿದ್ದಾಗ, ತನಗೇನಾದರೂ ಒಂದು ಗಂಡು ಮಗು ಆದರೆ ಅವನನ್ನು ಶ್ರೀರಾಮಕೃಷ್ಣರ ಸೇವೆಗೆ ಅರ್ಪಿಸುವುದಾಗಿ ನಿರ್ಧರಿಸಿದ್ದಳು. ಭಗವಂತನ ಕೃಪೆಯಿಂದ ಆಕೆಗೆ ಜನಿಸಿದ ಮಗ ನಾನೇ. ತನ್ನ ಮಾತಿನಂತೆ ನಡೆಯಲು ನಿರ್ಧರಿಸಿದಳು. ಒಂದು ದಿನ, ನನಗೆ ಕೆಲವು ವಾರಗಳಾಗಿದ್ದಾಗ, ನನ್ನನ್ನು ಮೆತ್ತಗೆ ಒಂದು ಬಟ್ಟೆಯಲ್ಲಿ ಸುತ್ತಿ ದಕ್ಷಿಣೇಶ್ವರಕ್ಕೆ ಎತ್ತಿಕೊಂಡು ಹೋದಳು. ನನ್ನ ತಂದೆ ನಮ್ಮ ಜತೆ ಬಂದರು. ಶ್ರೀರಾಮಕೃಷ್ಣರು ಭಾವೋನ್ಮಾದದಲ್ಲಿ ಒಬ್ಬರೇ ನಿಂತುಕೊಂಡಿದ್ದರು. ನನ್ನ ತಂದೆ ತಾಯಿಗಳನ್ನು ನೋಡಿದ ಕೂಡಲೆ, ಅವರು ನನ್ನ ತಾಯಿಗೆ ಹೇಳಿದರು: "ಆಹಾ! ನೀನು ನನಗೆ ತಂದಿರುವುದೇನು?" ತಾಯಿ ನನ್ನನ್ನು ಗುರುಮಹಾರಾಜರ ಪಾದಗಳ ಬಳಿ ಇಟ್ಟಳು ಮತ್ತು ಹೇಳಿದಳು: "ನಾನು ಈ ಕಾಣಿಕೆಯನ್ನು ನಿಮಗೆ ತಂದಿರುವೆನು." ಶ್ರೀರಾಮಕೃಷ್ಣರು ಕೆಲವು ಕ್ಷಣ ನನ್ನ ಕಡೆ ನೋಡಿ ನಂತರ ಹೇಳಿದರು: "ಹಾ! ಎಂತಹ ಸುಂದರವಾದ ಮಗು! ಇದನ್ನು ನನಗೆ ಕೊಡುತ್ತಿರುವೆಯಾ? ಒಳ್ಳೆಯದು!" ಅವರು ನನ್ನನ್ನು ತಮ್ಮ ತೊಡೆಯ ಮೇಲೆ ಇಟ್ಟುಕೊಂಡು ತಮ್ಮ ಬಲಹಸ್ತವನ್ನು ಆಶೀರ್ವಾದದಂತೆ ನನ್ನ ತಲೆಯ ಮೇಲೆ ಇಟ್ಟರು. ನಂತರ ನನ್ನನ್ನು ನನ್ನ ತಾಯಿಯ ತೋಳುಗಳ ಮೇಲೆ ಇಟ್ಟು, ಹೇಳಿದರು: "ಈಗ ಈ ಮಗುವನ್ನು ನೋಡಿಕೊ. ಆದರೆ ಅವನು ನನಗೆ ಸೇರಿದವನು ಎಂಬುದು ನೆನಪಿರಲಿ. ಸಮಯ ಬಂದಾಗ ನಾನು ಅವನನ್ನು ಹಿಂದಕ್ಕೆ ತೆಗೆದುಕೊಳ್ಳುವೆನು." ಕೆಲವು ವರ್ಷಗಳ ನಂತರ ನಾನು ರಾಮಕೃಷ್ಣ ಮಠಕ್ಕೆ ಸೇರಿಕೊಂಡಾಗ ಎಲ್ಲರಿಗಿಂತ ಹೆಚ್ಚು ಸಂತೋಷಪಟ್ಟವಳು ನನ್ನ ತಾಯಿ. ಏಕೆಂದರೆ ಶ್ರೀರಾಮಕೃಷ್ಣರು ನನ್ನನ್ನು ಸ್ವೀಕರಿಸಿದರು ಎಂದು ಅವಳು ಭಾವಿಸಿದಳು. (ಆಗ ಶ್ರೀರಾಮಕೃಷ್ಣರು ಕಾಲವಾಗಿದ್ದರು.)

ನಾನು ಸಣ್ಣ ಹುಡುಗನಾಗಿದ್ದಾಗ ಆಲಂಬಜಾರ್‌ನಲ್ಲಿದ್ದ ಮಠಕ್ಕೆ ನನ್ನ ತಂದೆತಾಯಿಯರೊಡನೆ ಹೋಗುತ್ತಿದ್ದೆನು. ಆಗ ಬೇಲೂರು ಮಠ ಇನ್ನೂ ಸ್ಥಾಪನೆಯಾಗಿರಲಿಲ್ಲ. ಸ್ವಾಮಿ ಬ್ರಹ್ಮಾನಂದರು, ರಾಮಕೃಷ್ಣಾನಂದರು, ಶಿವಾನಂದರು, ತುರೀಯಾನಂದರು ಮತ್ತು ಅದ್ವೈತಾನಂದರು ಆ ಸಮಯದಲ್ಲಿ ಅಲ್ಲಿ ವಾಸವಾಗಿದ್ದರು. ಕೆಲವು ವೇಳೆ ನಾನು ಮಠದಲ್ಲಿ ಅನೇಕ ದಿನಗಳು ಇರುತ್ತಿದ್ದೆ. ನಾನು ಮಹಾರಾಜ್ ಅವರನ್ನು, ಅಂದರೆ ಸ್ವಾಮಿ ಬ್ರಹ್ಮಾನಂದಜಿಯವರನ್ನು ಬಹಳ ಗಂಭೀರಸ್ವಭಾವದವರೆಂದು ಭಾವಿಸಿದ್ದೆನಾದ ಕಾರಣ ಅವರಿಂದ ದೂರವಿರಲು ಪ್ರಯತ್ನಿಸುತ್ತಿದ್ದೆ. ಸ್ವಾಮಿ ತುರೀಯಾನಂದರು ನನ್ನೊಡನೆ ಪ್ರೀತಿ-ವಿಶ್ವಾಸದ ಮಾತುಗಳನ್ನಾಡುತ್ತಿದ್ದರು ಮತ್ತು ನಾನು ಅವರ ಬಳಿ ಸಲಿಗೆಯಿಂದಿರುತ್ತಿದ್ದೆ. ನಾನು ಮಠದಲ್ಲಿ ರಾತ್ರಿ ಕಳೆಯಬೇಕಾಗಿ ಬಂದಾಗ ಸ್ವಾಮಿ ತುರೀಯಾನಂದರ ಕೋಣೆಯಲ್ಲಿ ಮಲಗುತ್ತಿದ್ದೆ. ಅವರು ಮಧ್ಯರಾತ್ರಿಯಲ್ಲಿ ಏಳುತ್ತಿದ್ದರು ಮತ್ತು ಧ್ಯಾನ ಮಾಡಲು ನನ್ನನ್ನೂ ಆಗ ಎಬ್ಬಿಸುತ್ತಿದ್ದರು.



ಸ್ವಾಮಿ ಬ್ರಹ್ಮಾನಂದರು

ಸ್ವಾಮಿ ವಿವೇಕಾನಂದರು ಕಾಲವಾದ ಮೇಲೆ ಮಹಾರಾಜ್ ಮತ್ತು ಸ್ವಾಮಿ ತುರೀಯಾನಂದರು ಬೃಂದಾವನಕ್ಕೆ ಹೋಗಿ ಅಲ್ಲಿ ಸಾಧನೆಯಲ್ಲಿ ತೊಡಗಿದರು. ಸ್ವಲ್ಪ ಕಾಲದ ನಂತರ ನಮ್ಮ ತಂದೆ

ಮತ್ತು ನಾನು ಕೂಡ ಅಲ್ಲಿಗೆ ಹೋದೆವು. ನಮ್ಮ ತಂದೆ ಯಾವಾಗ ಸ್ವಾಮಿಗಳನ್ನು ನೋಡಲು ಹೋಗುತ್ತಿದ್ದರೊ ಆಗ ನಾನೂ ಅವರ ಜತೆ ಹೋಗುತ್ತಿದ್ದೆ. ಸ್ವಾಮಿ ತುರೀಯಾನಂದರು ನನಗೆ ನಿಕಟವಾಗಿ ಗೊತ್ತಿದ್ದುದರಿಂದ ನನ್ನ ಸಮಯದ ಬಹು ಭಾಗವನ್ನು ಅವರ ಸಂಗಡ ಕಳೆಯುತ್ತಿದ್ದೆ. ಮಹಾರಾಜ್ ಅವರು ಇವರ ಪಕ್ಕದ ಕೋಣೆಯಲ್ಲಿರುತ್ತಿದ್ದರು. ಪ್ರತಿಸಲ ನಾನು ಸ್ವಾಮಿ ತುರೀಯಾನಂದರನ್ನು ನೋಡಲು ಹೋದಾಗ ಅವರಿಗೆ ಸಾಷ್ಟಾಂಗ ಪ್ರಣಾಮ ಮಾಡುತ್ತಿದ್ದೆ, ನಂತರ ಮಹಾರಾಜ್ ಅವರ ಕೋಣೆಯ ಬಾಗಿಲನ್ನು ಮೆಲ್ಲನೆ ಸರಿಸಿ ಬಾಗಿಲಿನಿಂದಲೇ ಮಹಾರಾಜ್ ಅವರಿಗೆ ಬಾಗಿ ನಮಸ್ಕರಿಸುತ್ತಿದ್ದೆ. ಅವರನ್ನು ಬಹಳ ಗಂಭೀರಸ್ವಭಾವದವರೂ ನಿಯಮವ್ರತಿಗಳೂ ಎಂದು ಭಾವಿಸುತ್ತಿದ್ದುದರಿಂದ ಅವರ ಮುಂದೆ ನಾನು ಗಾಬರಿಪಟ್ಟು ಕೊಳ್ಳುತ್ತಿದ್ದೆ. ಆದುದರಿಂದ ಅವರಿಗೆ ಸಾಷ್ಟಾಂಗ ಪ್ರಣಾಮ ಮಾಡುವುದಕ್ಕಾಗಲಿ ಅಥವಾ ಅವರ ಪಾದಗಳನ್ನು ಮುಟ್ಟು ವುದಕ್ಕಾಗಲಿ ಅವರ ಕೋಣೆಯೊಳಗಡೆ ಹೋಗುತ್ತಿರಲಿಲ್ಲ.

ನನ್ನ ನಡವಳಿಕೆಯನ್ನು ಗಮನಿಸುತ್ತಿದ್ದ ಸ್ವಾಮಿ ತುರೀಯಾ ನಂದರು ಒಂದು ದಿನ ಹೇಳಿದರು: "ಏನಿದು? ಒಳಗೆ ಹೋಗು, ಮಹಾರಾಜ್ ಅವರ ಮುಂದೆ ಸಾಷ್ಟಾಂಗ ಪ್ರಣಾಮ ಮಾಡಿ ಅವರ ಪವಿತ್ರ ಪಾದಗಳನ್ನು ಸ್ಪರ್ಶಿಸು." ಮನಸ್ಸಿನಲ್ಲೇ ಅಳು ಕುತ್ತಾ ಅವರ ಕೊಠಡಿಯನ್ನು ಪ್ರವೇಶಿಸಿ ತುರೀಯಾನಂದರು ಹೇಳಿದಂತೆ ಮಾಡಿ ಮಹಾರಾಜ್ ಅವರ ಮುಂದೆ ಮೌನವಾಗಿ ನಿಂತೆ. ಅವರು ನನ್ನ ಕಡೆ ಮೃದುವಾಗಿ ನೋಡಿ ವಿಶ್ವಾಸಪೂರ್ಣ ದನಿಯಲ್ಲಿ ಹೇಳಿದರು: "ಮಗು, ನನ್ನ ಕಾಲನ್ನು ಒತ್ತು." ಹೀಗೆ ಹೇಳುತ್ತಾ ಅವರು ಮಲಗಿಕೊಂಡರು. ಇನ್ನೂ ಭಯವಿದ್ದರೂ ನಾನು ಒತ್ತಲಾರಂಭಿಸಿದೆ. ಅದು ಅವರಿಗೆ ಕೂಡಲೆ ತಿಳಿಯಿತು. "ಗಾಬರಿ ಪಡಬೇಡ, ಮಗು" ಎಂದು ಹೇಳಿ ನನ್ನ ಬೆನ್ನನ್ನು ಮುಟ್ಟಿದರು. ಅವರ ಸ್ಪರ್ಶದೊಂದಿಗೆ ನನ್ನಲ್ಲಿ ಒಂದು ಸಂಪೂರ್ಣ ಪರಿವರ್ತನೆ ಆಯಿತು. ನನ್ನ ದೇಹದ ಶಕ್ತಿ ಯೆಲ್ಲಾ ಹೊರಟುಹೋದಂತಾಗಿ ಅವರ ಪಾದಗಳ ಮೇಲೆ ಮಲ ಗಿದೆ. ಮಹಾರಾಜ್ ಅವರು ಅಣಕಿಸುವಂತೆ, "ಆಹಾ! ನನ್ನ ಕಾಲುಗಳನ್ನು ಒತ್ತುವ ಬದಲು ಅವನ್ನು ದಿಂಬು ಮಾಡಿಕೊಳ್ಳು ತ್ತಿರುವೆಯಲ್ಲ!" ಎಂದರು. ನನ್ನ ಹೃದಯ ಅವರ್ಣನೀಯ ಆನಂದದಿಂದ ತುಂಬಿತು. ನಾನು ಎದ್ದು ಕುಳಿತು, "ನೀವು ನನಗೆ ಏನೋ ಮಾಡಿದ್ದೀರಿ" ಎಂದು ಹೇಳಿದೆ. ಒಳಗಿನ ಸಂತೋಷ ವನ್ನು ತಡೆಯಲಾಗದೆ ನಗಲಾರಂಭಿಸಿದೆ. ನನ್ನ ಭಯವೆಲ್ಲ ಹೋಗಿತ್ತು. ಮಹಾರಾಜ್ ಅವರಿಂದ ಹೊಮ್ಮುತ್ತಿರುವ ಭಗವತ್ಪ್ರೇಮದ ಸವಿ ನನಗೆ ಪ್ರಥಮ ಬಾರಿ ದೊರೆಯಿತು. ಮಹಾರಾಜ್ ಅವರು ಸ್ವಾಮಿ ತುರೀಯಾನಂದರಿಗೆ ಹಾಸ್ಯವಾಗಿ, "ನೋಡು, ನಾನು ನಿನ್ನ ಶಿಷ್ಯನನ್ನು ಅಪಹರಿಸಿಬಿಟ್ಟಿದ್ದೇನೆ" ಎಂದರಂತೆ. ಅದಕ್ಕೆ ಸ್ವಾಮಿ ತುರೀಯಾನಂದರು ನಗುತ್ತಾ, "ಸೊಗಸಾಯಿತು! ಈಗ ಆ ಹುಡುಗ ನಿಜವಾಗಿಯೂ ಧನ್ಯನಾದ" ಎಂದು ಹೇಳಿದರಂತೆ. ಇದು ನಂತರ ನನಗೆ ತಿಳಿಯಿತು.

ಸ್ವಾಮಿ ಪ್ರೇಮಾನಂದರ ಕಳಕಳಿಯ ಕೋರಿಕೆಯ ಮೇರೆಗೆ ಮಹಾರಾಜ್ ಅವರು ಬೇಲೂರು ಮಠಕ್ಕೆ ತೆರಳಿದರು. ನಮ್ಮ ತಂದೆ ಮತ್ತು ನಾನು ಅವರ ಜತೆ ಹೋದೆವು. ಬೇಲೂರಿಗೆ ಹೋಗುವ ಮಾರ್ಗದಲ್ಲಿ ವಿಂಧ್ಯಾಚಲ ಪರ್ವತದಲ್ಲಿರುವ ಜಗನ್ಮಾತೆಯ ದೇವ ಸ್ಥಾನವನ್ನು ನೋಡಬೇಕೆಂಬ ಆಸೆಯನ್ನು ಮಹಾರಾಜ್ ಅವರು ವ್ಯಕ್ತಪಡಿಸಿದರು. ಅದರಂತೆ ನಾವೆಲ್ಲ ಅಲ್ಲಿಗೆ ಹೋದೆವು.

ಮೊದಲನೆಯ ರಾತ್ರಿ ಮಹಾರಾಜ್, ನಮ್ಮ ತಂದೆ, ನಮ್ಮ ಆತಿಥೇಯರು, ಯೋಗೇಂದ್ರ ಸೇನ್ ಎಂಬ ಭಕ್ತರು ಮತ್ತು ನಾನು ಒಂದೇ ಕೊಠಡಿಯಲ್ಲಿ ಮಲಗಿದೆವು. ಇನ್ನೇನು ಮಧ್ಯರಾತ್ರಿಯ ಸಮಯ. ಆಗ ಯಾರೋ ನನ್ನನ್ನು ಮೆಲ್ಲಗೆ ಮುಟ್ಟಿದಂತಾಯಿತು. ನನಗೆ ಎಚ್ಚರವಾಯಿತು. ಮಹಾರಾಜ್ ಅವರು ಬಟ್ಟೆ ಹಾಕಿಕೊಂಡು ದಪ್ಪ ಕಂಬಳಿ ಹೊದ್ದುಕೊಂಡು ನಿಂತಿರುವುದನ್ನು ನೋಡಿದೆ. ಅವರು, "ಎದ್ದೇಳು, ಬೆಚ್ಚಗಿರುವ ಬಟ್ಟೆಯನ್ನು ಹಾಕಿಕೊ. ನೀನೂ ನನ್ನ ಜತೆ ಬಾ" ಎಂದರು. ಹಿಂದುಮುಂದೆಣಿಸದೆ ಅವರು ಹೇಳಿದಂತೆ ನಡೆದೆ. ನಾವು ಎಲ್ಲಿಗೆ ಹೋಗುತ್ತಿರುವೆವು ಎಂದು ಕೇಳಬೇಕೆನ್ನುವುದೂ ಆಗ ನನಗೆ ಹೊಳೆಯಲಿಲ್ಲ. ಮಹಾರಾಜ್ ಅವರು ಒಂದು ಕೈಯಲ್ಲಿ ಲಾಟೀನನ್ನೂ ಮತ್ತೊಂದು ಕೈಯಲ್ಲಿ ಒಂದು ಕೋಲನ್ನೂ ಹಿಡಿದು ಕೊಂಡು ಅವರನ್ನು ಹಿಂಬಾಲಿಸುವಂತೆ ನನಗೆ ಹೇಳಿದರು. ನಾವು ಹೊರಗೆ ಹೋದೆವು. ಅದು ಅಮಾವಾಸ್ಯೆಯ ಮಾರನೆಯ ದಿನ, ಕಗ್ಗತ್ತಲು. ದಾರಿ ಹಳ್ಳ ತಿಟ್ಟುಗಳಿಂದ ಕೂಡಿತ್ತು. ನಾನು ಎಡವು ತ್ತಿರುವುದನ್ನು ಗಮನಿಸಿ ಮಹಾರಾಜ್ ಅವರು ಲಾಟೀನನ್ನು ಹಿಡಿದು ಕೊಳ್ಳಲು ನನಗೆ ಕೊಟ್ಟು ನನ್ನ ಕೈಯನ್ನು ಹಿಡಿದುಕೊಂಡರು. ಆಗ ನಾನು, "ನಾವು ಎಲ್ಲಿಗೆ ಹೋಗುತ್ತಿರುವೆವು?" ಎಂದು ಕೇಳಿದೆ. "ಜಗ ನ್ಮಾತೆಯನ್ನು ನೋಡಲು" ಎಂದು ಅವರು ಉತ್ತರವಿತ್ತರು.

ನಾವು ದೇವಾಲಯದ ಹೊರ ಆವರಣವನ್ನು ಪ್ರವೇಶಿಸಿದಾಗ ಆ ಸ್ಥಳ ಭಕ್ತರಿಂದ ಕಿಕ್ಕಿರಿದಿತ್ತು. ಕೆಲವರು ಜಪಮಾಲೆ ತಿರುಗಿಸು ತ್ತಿದ್ದರು ಮತ್ತು ಇತರರು ಜಗನ್ಮಾತೆಯ ಮಹಿಮೆಯನ್ನು ಪಠಿಸು ತ್ತಿದ್ದರು. ಅಲ್ಲಿ ಒಂದು ಉತ್ಕಟ ಆಧ್ಯಾತ್ಮಿಕ ವಾತಾವರಣವಿತ್ತು. ದೇವಸ್ಥಾನದ ಬಾಗಿಲು ಇನ್ನೂ ಮುಚ್ಚಿತ್ತು. ಅರ್ಚಕರು ದೇವಿಯ ಮೂರ್ತಿಯನ್ನು ವಿಶೇಷ ಸಂದರ್ಭಕ್ಕಾಗಿ ಅಲಂಕರಿಸುತ್ತಿದ್ದರು. ಬಾಗಿಲುಗಳು ತೆರೆದಾಗ ಯಾತ್ರಿಕರು ಎದ್ದು ನಿಂತು ತಾಯಿಯ ದರ್ಶನಕ್ಕಾಗಿ ನಿಧಾನವಾಗಿ ಮುಂದೆ ಸರಿದರು. ಈ ಮಧ್ಯೆ ಅರ್ಚಕರು ಮಹಾರಾಜ್ ಅವರನ್ನು ಗುರುತಿಸಿದರು. ಅವರ ಗಂಭೀರ ಮುಖಮುದ್ರೆಯನ್ನು ಕಂಡು ಅವರ ವ್ಯಕ್ತಿತ್ವದಿಂದ ಪ್ರಭಾವಿತರಾಗಿ, ಯಾತ್ರಿಕರು ಮುಂದೆ ಬರುವುದನ್ನು ತಡೆಗಟ್ಟಿ ಮಹಾರಾಜ್ ಅವರನ್ನು ಮೊದಲು ಪ್ರವೇಶಿಸಲು ಬಿಟ್ಟರು. ಅವರು ನನ್ನ ಕೈಯನ್ನು ಇನ್ನೂ ಹಿಡಿದುಕೊಂಡಿದ್ದರು ಮತ್ತು ನಾನು ಅವರ ಹಿಂದೆ ಹೋಗುತ್ತಿದ್ದೆ.

ಮಹಾರಾಜ್ ಅವರು ಜಗನ್ಮಾತೆಯ ಮೂರ್ತಿಯ ಮುಂದೆ ನಿಂತಾಗ ಅವರು ಉದ್ಗರಿಸಿದರು: "ಆಹಾ! ಎಷ್ಟು ಸುಂದರ! ಎಷ್ಟು ಸುಂದರ!" ಮುಂದಿನ ಕ್ಷಣ ಅವರು ಭಾವೋನ್ಮುಖರಾದರು. ದೇವಸ್ಥಾನ ಸಂಪೂರ್ಣ ನಿಶ್ಶಬ್ದವಾಗಿತ್ತು. ಅರ್ಚಕರು ಮತ್ತು ಯಾತ್ರಿಕರು ಮಹಾರಾಜ್ ಅವರ ದೈವೋನ್ಮಾದ ಸ್ಥಿತಿಯನ್ನು ಆಶ್ಚರ್ಯಚಕಿತರಾಗಿ ನೋಡಿದರು. ಸ್ವಲ್ಪ ಸಮಯದ ನಂತರ ಇನ್ನೂ ಭಾವೋನ್ಮುಖರಾಗಿರುವಂತೆಯೇ ಜಗನ್ಮಾತೆಗೆ ಸಂಬಂಧಿಸಿದಂತೆ ಒಂದು ಹಾಡನ್ನು ಹಾಡುವಂತೆ ನನಗೆ ಹೇಳಿದರು. ನಾನು ಹಾಡುತ್ತಿರುವಾಗ ಆನಂದಬಾಷ್ಪ ಅವರ ಕಣ್ಣುಗಳ ಹೊರ ತುದಿಯಿಂದ ಬಂದವು. ಅದು ನೋಡಲು ಒಂದು ದೈವೀದೃಶ್ಯವಾಗಿತ್ತು. ಮಹಾರಾಜ್ ಅವರು ನನಗೆ ಮತ್ತೊಂದು ಹಾಡನ್ನು ಹಾಡಲು ಹೇಳಿದರು. ಅದಾದ ನಂತರ ನಾವು ದೇವಿಗೆ ನಮಸ್ಕರಿಸಿ ಹೊರಗಡೆ ಅಂಗಳಕ್ಕೆ ಬಂದೆವು. ಮಹಾರಾಜ್ ಅವರು ಜಪ ಮಾಡಲು ಒಂದು ಮೂಲೆಯಲ್ಲಿ ಕುಳಿತರು ಮತ್ತು ನನ್ನನ್ನೂ ಕುಳಿತುಕೊಳ್ಳಲು ಹೇಳಿದರು. "ನಾನು ಏನು ಮಾಡಲಿ?" ಎಂದು ಕೇಳಿದೆ. ಅವರು, "ಜಗನ್ಮಾತೆಯ ಸಾನ್ನಿಧ್ಯವನ್ನು ಕುರಿತು ಚಿಂತಿಸು. ನಂತರ ನಿನಗೆ ಸೂಚನೆಗಳನ್ನು ಕೊಡುವೆನು" ಎಂದು ಹೇಳಿದರು. ಸ್ವಲ್ಪ ಹೊತ್ತು ಅಲ್ಲಿದ್ದು, ಯೋಗೀಂದ್ರ ಸೇನ್ ಅವರ ಮನೆಗೆ ಬೆಳಗಾಗುವುದಕ್ಕೆ ಮುಂಚೆ ಹಿಂತಿರುಗಿದೆವು.

ವಿಂಧ್ಯಾಚಲದ ಹತ್ತಿರ ಒಂದು ಪರ್ವತದ ಬುಡದಲ್ಲಿ ಒಂದು ಗುಹೆಯ ದೇವಸ್ಥಾನವಿತ್ತು. ಒಂದು ದಿನ ನಾವು ಮತ್ತೆ ಕೆಲವು ಭಕ್ತರೊಡನೆ ಅದರ ಹತ್ತಿರ ವನವಿಹಾರಕ್ಕೆ ಹೋದೆವು. ಭಕ್ತರು ತರಕಾರಿ ಹೆಚ್ಚುತ್ತಾ ಅಡುಗೆ ಮಾಡಲು ಸಿದ್ಧರಾಗುತ್ತಿದ್ದಾಗ ಮಹಾರಾಜ್ ಅವರು ಎಲ್ಲಿಗೊ ಹೊರಟು ತಮ್ಮ ಹಿಂದೆ ಬರುವಂತೆ ನನಗೆ ಹೇಳಿದರು. ನಾವು ಬೆಟ್ಟವನ್ನು ಹತ್ತಿ ಗುಹೆಯ ದೇವಾಲಯದ ದ್ವಾರವನ್ನು ತಲುಪಿದೆವು. ಒಳಗಡೆ ಕಗ್ಗತ್ತಲು. ನಾವು ಗುಹೆಯನ್ನು ಪ್ರವೇಶಿಸಿ ದೇವರ ಹತ್ತಿರದವರೆಗೂ ನಿಧಾನವಾಗಿ ನಡೆದೆವು. ಬಹಳ ನಿಶ್ಶಬ್ದವಾಗಿತ್ತು, ಪಕ್ಷಿಗಳ ಶಬ್ದ ಕೂಡ ಕೇಳಿಸುತ್ತಿರಲಿಲ್ಲ. ಮಹಾರಾಜ್ ಅವರು ಜಗನ್ಮಾತೆಯ ವಿಗ್ರಹದ ಪಕ್ಕದಲ್ಲಿ ಕುಳಿತರು ಮತ್ತು ನಾನು ಅವರ ಪಕ್ಕದಲ್ಲಿ ಕುಳಿತೆ. ಸ್ವಲ್ಪ ಸಮಯದ ನಂತರ ಮಾತೆಯ ಗುಣಗಾನ ಮಾಡುವಂತೆ ನನಗೆ ಹೇಳಿದರು. ಹಾಡನ್ನು ಕೇಳುತ್ತಿದ್ದಂತೆ ಮಹಾರಾಜ್ ಅವರು, ಆ ದೇವಸ್ಥಾನದಲ್ಲಿ ಆದಂತೆ ಭಾವಮುಖರಾದರು. ಮೊದಲು ಅವರ ದೇಹ ಸ್ವಲ್ಪ ಕಂಪಿಸಿತು, ದೇಹದ ಮೇಲೆ ರೋಮಗಳು ನೆಟ್ಟಗೆ ನಿಂತವು, ಆನಂದಬಾಷ್ಪ ಅವರ ಕಪೋಲಗಳ ಮೇಲೆ ಹರಿದವು. ಆಗ ಅವರು ಸಂಪೂರ್ಣ ಸ್ಥಿರವಾದರು. ಅವರು ಸಂಪೂರ್ಣ ಬಾಹ್ಯಪ್ರಜ್ಞಾಶೂನ್ಯರಾದರು. ನನಗೆ ಭಯವಾಗಲಿಲ್ಲ, ಏಕೆಂದರೆ ಶ್ರೀರಾಮಕೃಷ್ಣರು ಈ ರೀತಿ ಸಮಾಧಿಗೆ ಹೋಗುತ್ತಿದ್ದುದನ್ನು ಕೇಳಿದ್ದೆ.

ಸ್ವಲ್ಪ ಹೊತ್ತಾದ ಮೇಲೆ ಮಹಾರಾಜ್ ಅವರು ನಿಧಾನವಾಗಿ ಸಾಮಾನ್ಯ ಪ್ರಜ್ಞಾವಸ್ಥೆಗೆ ಬಂದರು. ಅನಂತರ ನಾವು ಗುಹೆಯಿಂದ ಹೊರಕ್ಕೆ ಬಂದೆವು. ನಾವೀಗ ವನವಿಹಾರದ ಸ್ಥಳಕ್ಕೆ ಹಿಂತಿರುಗುವೆವೆಂದು ಭಾವಿಸಿದೆ. ಆದರೆ, ಅದಕ್ಕೆ ಬದಲಾಗಿ ಮಹಾರಾಜ್ ಅವರು ಬೆಟ್ಟವನ್ನು ಇನ್ನೂ ಮೇಲಕ್ಕೆ ಹತ್ತಲು ಪ್ರಾರಂಭಿಸಿದರು. ನಾನು ಅವರನ್ನು ಹಿಂಬಾಲಿಸಿದೆ. ನಾವು ಶಿಖರವನ್ನು ತಲುಪಿದೆವು. ಮಹಾರಾಜ್ ಅವರು ಒಂದು ಬಂಡೆಯ ಮೇಲೆ ಯೋಗಿಗಳ ಭಂಗಿಯಲ್ಲಿ ಕುಳಿತರು. ನನ್ನನ್ನೂ ಹಾಗೆಯೇ ಮಾಡುವಂತೆ ಹೇಳಿದರು. ಕುಳಿತಿರುವಾಗ ನನ್ನಷ್ಟಕ್ಕೆ ನಾನೇ ಯೋಚಿಸಿದೆ, "ಮಹಾರಾಜ್ ಅವರು ನನ್ನನ್ನು ಇಲ್ಲಿ ಕುಳಿತುಕೊಳ್ಳಲೇನೊ ಹೇಳಿದರು; ಆದರೆ ನನಗೆ ಯಾವ ಸೂಚನೆಯನ್ನೂ ಕೊಡಲಿಲ್ಲವಲ್ಲ" ಎಂದು. ನಾನು ಯಾವುದರ ಮೇಲೆ ಮತ್ತು ಹೇಗೆ ಧ್ಯಾನ ಮಾಡಬೇಕೆಂದು ಅವರನ್ನು ಕೇಳಿದೆ: "ನಿನಗೆ ಇಷ್ಟವಾಗುವ, ಭಗವಂತನ ಯಾವ ಭಾವದ ಮೇಲಾದರೂ ಧ್ಯಾನಿಸು" ಎಂದು ಅವರು ಉತ್ತರವಿತ್ತರು.

ಮತ್ತೊಂದು ದಿನ ನಾವು ಆ ಪರ್ವತವನ್ನು ಇನ್ನೊಂದು ಕಡೆಯಿಂದ ಹತ್ತಿದೆವು. ನಾವು ಶಿಖರವನ್ನು ತಲುಪಿದಾಗ ಸೂರ್ಯ ಮುಳುಗುತ್ತಿದ್ದನು. ಮಹಾರಾಜ್ ಅವರು ನನಗೆ ಈ ಹಾಡನ್ನು ಹಾಡುವಂತೆ ಹೇಳಿದರು:

ಕಳೆಯಿತೀ ದಿನ ಓ, ನನ್ನ ಮನ,  
ಮಾಡಿರುವೆ ಯಾವ ಯತ್ನವ ನೀ  
ಭವಸಾಗರವ ದಾಟಲು?  
ಜೀವನದ ಸೂರ್ಯನಿದೊ ಮುಳುಗುತಿಹನು.  
ನಿರ್ಲಕ್ಷ್ಯದಿಂದಿರುವೆ ಮುಳುಗುತಿರುವುದ ಕಂಡರೂ.  
ಭ್ರಮಿಸಿ ಅನಿತ್ಯ ಲೋಕದ ಮಾಯೆಯಿಂ,  
ಕಳೆದುಕೊಳ್ಳುವೆ ನಿತ್ಯ ಸಂಪದವ.

ಹಾಡನ್ನು ಕೇಳುತ್ತಾ ಮಹಾರಾಜ್ ಅವರು ಧ್ಯಾನದಲ್ಲಿ ಸಂಪೂರ್ಣವಾಗಿ ತಲ್ಲೀನರಾದರು. ಹಾಡು ಮುಗಿದ ಮೇಲೆ ಇನ್ನೂ ಸ್ವಲ್ಪ ಹೊತ್ತು ಅದೇ ಸ್ಥಿತಿಯಲ್ಲಿದ್ದರು. ಕತ್ತಲಾಗುತ್ತಿತ್ತು. ಆಗ ನಾವು ಹಿಂತಿರುಗಿದೆವು.

ವಿಂಧ್ಯಾಚಲದಲ್ಲಿ ಮೂರುದಿನಗಳು ಇರಬೇಕೆಂದು ಅವರು ಮೊದಲು ಉದ್ದೇಶಿಸಿದ್ದರೂ ಮಹಾರಾಜ್‌ರೊಡಗೂಡಿ ನಾವೆಲ್ಲರೂ ಬೇಲೂರು ಮಠವನ್ನು ಸೇರುವ ಮೊದಲು ಇಪ್ಪತ್ತೊಂದು ದಿನಗಳನ್ನು ಹೀಗೆ ಅಲ್ಲಿ ಕಳೆದೆವು. *

**ಜೀವನ ಅಶಾಶ್ವತ. ಮನುಷ್ಯನ ಆಯಸ್ಸು ಹೆಚ್ಚೆಂದರೆ ನೂರು ವರ್ಷ. ನೀವು ಶಾಶ್ವತ ಜೀವನವನ್ನು, ಅದರೊಂದಿಗೆ ಶಾಶ್ವತ ಆನಂದವನ್ನು ಅನುಭವಿಸಬೇಕೆಂದಿದ್ದರೆ, ಈ ನೂರು ವರ್ಷಗಳ ಸುಖವನ್ನು ತ್ಯಾಗಮಾಡಿ.**

—ಸ್ವಾಮಿ ಬ್ರಹ್ಮಾನಂದ